# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 206 (17) |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13-09-2022 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯ ನಾಗಮಂಗಲ ಪುರಸಭೆ ವ್ಯಾಪ್ತಿಯ ಅಮೃತ ನಗರೋತ್ಥಾನ (ಹಂತ 4) ರ ಯೋಜನೆ ಅಡಿಯಲ್ಲಿ ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗಿದ್ದ ಅನುದಾನದ ಮೊತ್ತವೆಷ್ಟು; | ಸರ್ಕಾರದ ಆದೇಶ ಸಂಖ್ಯೆ: ನಅಇ/124/ಸಮಸ/2021 ದಿನಾಂಕ: 14-01-2022, ತಿದ್ದುಪಡಿ ಆದೇಶ ದಿನಾಂಕ: 14-03-2022, 30-03-2022 ಹಾಗೂ 24-06-2022ಗಳಲ್ಲಿ ನಾಗಮಂಗಲ ಪುರಸಭೆಗೆ ರೂ.10.00 ಕೋಟಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. |
| ಆ) | ಈ ಅನುದಾನವನ್ನು ಸಮರ್ಪಕವಾಗಿ ಬಳಸಿ ಕೊಳ್ಳಲಾಗಿದೆಯೇ; (ವಿವರಗಳನ್ನು ನೀಡುವುದು) | ಸದರಿ ಅನುದಾನಕ್ಕೆ ಸರ್ಕಾರದ ಆದೇಶ ದಿನಾಂಕ: 14-01-2022, ತಿದ್ದುಪಡಿ ಆದೇಶ ದಿನಾಂಕ:14-03-2022, 30-03-2022 ಹಾಗೂ 24-06-2022ಗಳ ಮಾರ್ಗಸೂಚಿಗಳನ್ವಯ ತಯಾರಿಸಿರುವ ಕ್ರಿಯಾಯೋಜನೆಗೆ ಜಿಲ್ಲಾಮಟ್ಟದ ಹಾಗೂ ರಾಜ್ಯಮಟ್ಟದ ಸಮಿತಿಯು ಅನುಮೋದನೆ ನೀಡಿದ್ದು, ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಸದರಿ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. |
| ಇ) | ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಾಗಿದೆ; ಇವುಗಳಲ್ಲಿ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; (ವಿವರಗಳನ್ನು ನೀಡುವುದು) | ಸದರಿ ಯೋಜನೆಯಡಿ ರೂ.698.39 ಲಕ್ಷಗಳ 12 ಕಾಮಗಾರಿಗಳ ಕ್ರಿಯಾಯೋಜನೆಯು ಅನುಮೋದನೆಯಾಗಿದ್ದು, ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿರುತ್ತದೆ. ಕಾಮಗಾರಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಈ) | ಈ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ನಿಗಧಿಪಡಿಸಿ ವೆಚ್ಚ ಮಾಡಿರುವ ಮೊತ್ತವೆಷ್ಟು; (ಕಾಮಗಾರಿಗಳವಾರು ವಿವರಗಳನ್ನು ನೀಡುವುದು.) | ಸದರಿ ಯೋಜನೆಯಡಿ ಈವರೆವಿಗೂ ಯಾವುದೇ ವೆಚ್ಚವಾಗಿರುವುದಿಲ್ಲ. |

| | | |
|---|---|---|
| ಉ) | ಸರ್ಕಾರ ನೀಡಿದ ಅನುದಾನವನ್ನು ಕೆಲವು ಆಯ್ದ ವಾರ್ಡುಗಳಿಗೆ ಮಾತ್ರ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ.<br><br>ಸದರಿ ಯೋಜನೆಯ ಮಾರ್ಗಸೂಚಿಗಳನ್ವಯ ನಾಗಮಂಗಲ ಪುರಸಭೆಯು ಅವಶ್ಯಕತೆಗನುಗುಣವಾಗಿ ಕ್ರಿಯಾಯೋಜನೆಯನ್ನು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಸಮಿತಿ ಸಭೆಯ ಶಿಫಾರಸ್ಸಿನಂತೆ ಮಾನ್ಯ ಪೌರಾಡಳಿತ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. |
| ಊ) | ಹಾಗಿದ್ದಲ್ಲಿ, ಈ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸದರಿ ಕ್ರಿಯಾಯೋಜನೆಯನ್ನು ಯೋಜನೆಯ ಮಾರ್ಗಸೂಚಿಗಳನ್ವಯ ತಯಾರಿಸಿರುವುದರಿಂದ, ಅನುದಾನ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಉಂಟಾಗಿರುವುದಿಲ್ಲ. ಇದರಲ್ಲಿ ಅಧಿಕಾರಿಗಳ ಪಾತ್ರ ಇಲ್ಲದಿರುವುದರಿಂದ, ಯಾವುದೇ ಕ್ರಮ ತೆಗೆದುಕೊಳ್ಳುವ ಸಂದರ್ಭ ಉದ್ಭವಿಸುವುದಿಲ್ಲ. |

ಸಂಖ್ಯೆ:ನಅಇ 263 ಎಸ್‌ಎಫ್‌ಸಿ 2022

**[ಎನ್. ನಾಗರಾಜ್ (ಎಂ.ಟಿ.ಬಿ)]**
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

# ಅನುಬಂಧ-1

ಸ್ಥಳೀಯ ಸಂಸ್ಥೆ ಹೆಸರು: ಪುರಸಭೆ, ನಾಗಮಂಗಲ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| | **ಪರಿಶಿಷ್ಟ ಜಾತಿ ಎಸ್.ಸಿ.ಎಸ್.ಪಿ. ಜನಾಂಗದ ಕಲ್ಯಾಣ ಕಾರ್ಯಕ್ರಮ** | |
| 1 | ಪರಿಶಿಷ್ಟ ಜನಾಂಗದ ಕಲ್ಯಾಣ ಯೋಜನೆಯಡಿಯಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲು ಮೊತ್ತ(ಶೇ.20)<br>1) ಪೌರಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣ<br>2) ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯದಲ್ಲಿ ತೊಡಗಿರುವ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ, ವೈದ್ಯಕೀಯ ವೆಚ್ಚ, ಸುರಕ್ಷಾ ಧಿರಿಸುಗಳನ್ನು ಖರೀದಿಸಲು, ವಿಮೆ ಪಾಲಿಸಿ, ಬೆಳಗಿನ ಉಪಹಾರಕ್ಕಾಗಿ. | 29.16 |
| | **ಪರಿಶಿಷ್ಟ ಪಂಗಡ ಜನಾಂಗದ ಕಲ್ಯಾಣ ಕಾರ್ಯಕ್ರಮದಡಿ ಸಮುದಾಯ ಸಂಬಂಧಿತ ಕಾರ್ಯಕ್ರಮ** | |
| 2 | ನಾಗಮಂಗಲ ಪುರಸಭೆ ವ್ಯಾಪ್ತಿಯ ವಾರ್ಡ್ ನಂ.01ರ ಸುಭಾಷನಗರ ಮುಳುಕಟ್ಟೆ ಎಸ್ ಎಸ್ ವಿ ಸೈಬರ್ ಕೆಫೆಯಿಂದ ಮಳೆನೀರು ಚರಂಡಿವರೆಗೆ ಚರಂಡಿ ಅಭಿವೃದ್ಧಿ, ರತ್ನಮ್ಮ ಮನೆಯಿಂದ ಅಂಗಡಿ ಶಿವಣ್ಣ ಮನೆಯುವರೆಗೆ ಚರಂಡಿ ಅಭಿವೃದ್ಧಿ, ರಾಜೇಶ್ವರಿ ಮನೆಯಿಂದ ಮುಳುಕಟ್ಟೆ ರಸ್ತೆವರೆಗೂ ಚರಂಡಿ ಅಭಿವೃದ್ಧಿ, ಅಂಗಡಿ ರಾಜಣ್ಣ ಮನೆಯಿಂದ ಹಂದಿ ಚೆನ್ನಮ್ಮ ಮನವರೆಗೂ ಚರಂಡಿ ಅಭಿವೃದ್ಧಿ, ಮಂಜುಳ ಶ್ರೀನಿವಾಸ್ ಮನೆಯಿಂದ ಮುಳಕಟ್ಟೆ ರಸ್ತೆವರೆಗೆ ಚರಂಡಿ ಅಭಿವೃದ್ಧಿ, ಮುಳುಕಟ್ಟೆ ರಸ್ತೆಯಿಂದ ಬಿಂಡಿಗನವಿಲೆ ರಸ್ತೆ ಮಾಂಸದ ಅಂಗಡಿಯ ವರೆಗೂ ಚರಂಡಿ ಅಭಿವೃದ್ಧಿ, ವಾರ್ಡ್ ನಂ-08ರಲ್ಲಿ ಪಡುವಲಪಟ್ಟಣ ರಸ್ತೆಯಿಂದ ಕಾಲೇಜು ಹಿಂಭಾಗ ರಸ್ತೆ ಮತ್ತು ಚರಂಡಿ ನಿರ್ಮಾಣ. | 69.97 |
| | **ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮದಡಿ ಸಮುದಾಯ ಸಂಬಂಧಿತ ಕಾರ್ಯಕ್ರಮ** | |
| 3 | ವಾರ್ಡ್ ನಂ:08 ಬಡಗೂಡಮ್ಮ ದೇವಸ್ಥಾನದಿಂದ ಪಿ.ಕೆ ಕಾಲೋನಿ ಜಂಕ್ಷನ್ ವರೆಗೆ ರಸ್ತೆ ಅಭಿವೃದ್ಧಿ, ಪಡುವಲಪಟ್ಟಣ ರಸ್ತೆಯಿಂದ ಕೆಂಪೇಗೌಡನ ಮನೆಯವರೆಗೆ, ವಾರ್ಡ್ -10 ರಲ್ಲಿ ಇಸ್ಲಾಂಪುರ್ ಸಜೀರ್ ಸಾಬ್ ಮನೆಯಿಂದ ಶಿಕಾರಿ ಅಜೀಜ್ ಮನೆಯವರೆಗೆ(ಸ್ಮಶಾನದವರೆಗೆ) ರಸ್ತೆ ಅಭಿವೃದ್ಧಿ, ವಾರ್ಡ್ ನಂ-11 ರಲ್ಲಿ ಉಮೇಶನ ಮನೆಯಿಂದ ಬ್ಯಾಂಕ್ ಜವರಪ್ಪನ ಮನೆಯ ಹತ್ತಿರ (ಕುಳ್ಳಪ್ಪ) ಹಾಗೂ ಆಂಜನೇಯಸ್ವಾಮಿ ದೇವಸ್ಥಾನದಿಂದ ಈರಪಾಸಿ ಮನೆಯವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ. | 36.98 |
| | **ವಿಕಲಚೇತನರ ಕಲ್ಯಾಣ ಕಾರ್ಯಕ್ರಮದಡಿ ಸಮುದಾಯ ಸಂಬಂಧಿತ ಕಾರ್ಯಕ್ರಮ** | |
| 4 | ನಾಗಮಂಗಲ ಪುರಸಭೆ ವ್ಯಾಪ್ತಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ವಿಕಲ ಚೇತನ ಸ್ನೇಹಿ ಶೌಚಾಲಯ ನಿರ್ಮಾಣ | 21.25 |
| | **ರಸ್ತೆ ಅಭಿವೃದ್ಧಿ ಕಾಮಗಾರಿಗಳು ಮತ್ತು ಇನ್ನಿತರೆ ಸಂಬಂಧಪಟ್ಟ ಅಭಿವೃದ್ಧಿ ಕಾಮಗಾರಿಗಳು** | |
| 5 | ನಾಗಮಂಗಲ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:04ರಲ್ಲಿ ಶನಿದೇವರ ದೇವಸ್ಥಾನದಿಂದ ಎನ್.ಎಚ್.ಮುಖ್ಯರಸ್ತೆಯವರೆಗೆ, ಮಹಾದೇವ ವಕೀಲರ ಮನೆಯಿಂದ ಹಾಲಿನ ಡೈರಿಯವರೆಗೆ, ಟೀಚರ್ಸ್ ಕಾಲೋನಿ ಅಡ್ಡ ರಸ್ತೆಗಳ ಅಭಿವೃದ್ಧಿ, ಎನ್ ಹೆಚ್ ರಸ್ತೆಯಿಂದ ಸಾವಿತ್ರಮ್ಮ ರಂಗಪ್ಪರವರ ಮನೆಗೆ ಹೋಗುವ ರಸ್ತೆ ಅಭಿವೃದ್ಧಿ | 50.00 |

| ಕ್ರಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| 6 | ವಾರ್ಡ್ ನಂ:13 ಮೈಸೂರು ರಸ್ತೆಯಿಂದ ವೀರಭದ್ರಸ್ವಾಮಿ ದೇವಸ್ಥಾನದ ಮುಂಭಾಗದ ಮುಖಾಂತರ ಸುಲ್ತಾನಪೇಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ, ವಾರ್ಡ್ ನಂ:05ರಲ್ಲಿ ಪೊಲೀಸ್ ಸ್ಟೇಷನ್ ಹಿಂಭಾಗ ಮತ್ತು ಎನ್ ಎಚ್ ರಸ್ತೆಯಿಂದ ಗೊಬ್ಬರದ ಅಂಗಡಿ ರಮೇಶನ ಅಂಗಡಿಯ ಮುಂದೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ವಾರ್ಡ್ ನಂ:07ರಲ್ಲಿ ಬೆಟ್ಟದ ಮಲ್ಲೇನಹಳ್ಳಿ ರಸ್ತೆಯಿಂದ(ಹುಚ್ಚಮ್ಮ ದೇವಸ್ಥಾನದಿಂದ) ನಗರೇಶ್ವರ ದೇವಸ್ಥಾನದ ಮುಖಾಂತರ ಮಾರಮ್ಮ ಸರ್ಕಲ್ ವರೆಗೆ ರಸ್ತೆ ಅಭಿವೃದ್ಧಿ, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಮತ್ತು ಪಕ್ಕ, ಒಕ್ಕಲಿಗ ಸಮುದಾಯ ಭವನದ ಹಿಂಭಾಗ ರಸ್ತೆ ಅಭಿವೃದ್ಧಿ | 73.00 |
| 7 | ವಾರ್ಡ್ ನಂ-16, ವಾರ್ಡ್ ನಂ:02 ಹಾಗೂ ವಾರ್ಡ್ ನಂ:23ರ ಕೆ ಮಲ್ಲೇನಹಳ್ಳಿಯಲ್ಲಿ ಅಡ್ಡರಸ್ತೆಗಳ ಅಭಿವೃದ್ಧಿ | 50.00 |
| 8 | ನಾಗಮಂಗಲ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:21ರಲ್ಲಿ ಮಂಡ್ಯ ರಸ್ತೆಯಿಂದ ಗದ್ದೆಭೂವನಹಳ್ಳಿವರೆಗೆ, ವಾರ್ಡ್ ನಂ:23ರಲ್ಲಿ ಮಾಯಣ್ಣ ಗೌಡನಕೊಪ್ಪಲಿನಲ್ಲಿ ರಸ್ತೆ ಅಭಿವೃದ್ಧಿ | 62.00 |
| 9 | ವಾರ್ಡ್ ನಂ-18ರಲ್ಲಿ ಎನ್ ಎಚ್ ರಸ್ತೆಯಿಂದ ಮದಲಹಳ್ಳಿಗೆ ಹೋಗುವ ಕಾಲುವೆ ಪಕ್ಕದ ರಸ್ತೆ ಹಾಗೂ ಮದಲಹಳ್ಳಿ ಅಡ್ಡರಸ್ತೆಗಳ ಅಭಿವೃದ್ಧಿ ಹಾಗೂ ಪಿ.ಡಬ್ಲ್ಯೂ.ಡಿ ಕಛೇರಿ ಹಿಂಭಾಗದ ಅಡ್ಡರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಬಳಪದ ಮಂಟಿಕೊಪ್ಪಲು ಅಡ್ಡರಸ್ತೆಗಳ ಅಭಿವೃದ್ಧಿ, ತೊಳಲಿಯಲ್ಲಿ ಮತ್ತು ಚೌಡೇನಹಳ್ಳಿ ಅಡ್ಡರಸ್ತೆಗಳ ಅಭಿವೃದ್ಧಿ | 85.00 |
| 10 | ವಾರ್ಡ್ ನಂ:17ರಲ್ಲಿ ಅಡ್ಡರಸ್ತೆಗಳ ಅಭಿವೃದ್ಧಿ, ವಾರ್ಡ್ ನಂ:02ರಲ್ಲಿ ಅಡ್ಡ ರಸ್ತೆಗಳ ಅಭಿವೃದ್ಧಿ | 58.72 |
| | ಚರಂಡಿ ನಿರ್ಮಾಣ ಕಾಮಗಾರಿಗಳು | |
| 11 | ನಾಗಮಂಗಲ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:04ರಲ್ಲಿ ಟೀಚರ್ಸ್ ಕಾಲೋನಿ, ಮದಲಹಳ್ಳಿ ಪುಟ್ಟರಾಜುರವರ ಮನೆಯಿಂದ ಪೊಲೀಸ್ ಕೆಂಪಣ್ಣರವರ ಮನೆಯ ಮುಂಭಾಗದಿಂದ ಕುದುರೆ ಡಾಬಾದವರೆಗೆ, ವಾರ್ಡ್ ನಂ:16ರಲ್ಲಿ ಹಾಗೂ ವಾರ್ಡ್ ನಂ:07ರಲ್ಲಿ ಕೆಂಪೇಗೌಡರ ಮನೆಯಿಂದ ರಾಮಕೃಷ್ಣ ಮನೆಯವರೆಗೆ ಹಾಗೂ ಬೆಟ್ಟದ ಮಲ್ಲೇನಹಳ್ಳಿ ರಸ್ತೆಯಿಂದ ಶಿವರಾಮು ಮನೆಯವರೆಗೆ ಮತ್ತು ಒಕ್ಕಲಿಗ ಸಮುದಾಯ ಭವನದ ಮುಂಭಾಗ ಹಾಗೂ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಹಿಂಭಾಗ ಚರಂಡಿ ನಿರ್ಮಾಣ ಕಾಮಗಾರಿ. | 95.00 |
| 12 | ಬ್ರಾಹ್ಮಣರ ಸ್ಮಶಾನದವರೆಗೆ ತಡೆಗೋಡೆ ನಿರ್ಮಾಣ ಹಾಗೂ ಕಾಂಪೌಂಡ್ ಅಭಿವೃದ್ಧಿ ಕಾಮಗಾರಿ ಹಾಗೂ ವಾರ್ಡ್ ನಂ:17ರಲ್ಲಿ ಈಶ್ವರಪ್ಪ ಮನೆಯಿಂದ ಶಿವರಾಮೇಗೌಡರ ಮನೆಯವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ. ವಾರ್ಡ್ ನಂ:8ರಲ್ಲಿ ಪಡುವಲಪಟ್ಟಣ ರಸ್ತೆಯಿಂದ ನರಸಿಂಹ ಮನೆಯವರೆಗೆ ಚರಂಡಿ ಅಭಿವೃದ್ಧಿ, ವಾರ್ಡ್ ನಂ:8ರಲ್ಲಿ ಮಾರುತಿ ನಗರ ಅಡ್ಡರಸ್ತೆಗಳ ಚರಂಡಿ ಅಭಿವೃದ್ಧಿ ಕಾಮಗಾರಿ | 67.31 |
| | ಒಟ್ಟು | 698.39 |

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು